DOC-53
T-P-2

(1)

Reg no KRNN 12 — For Influential Publicity — 26-9-76

ಕೃಷ್ಣ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರನೇರಿಸಲಿರುವ ಪತ್ರಿಕೆ

ಸತ್ಯವಾದಿ

SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ

★ Satyavadi Daily. Mysore 4 ★

ಸಂಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | 5 ಪೈಸೆ

5 ನೇ ಯೋಜನೆಯ ಬಂಡವಾಳಕ್ಕೆ ಅನುಮೋದನೆ

ನವ ದೆಹಲಿ — ಸರ್ಕಾರಿ ವೃತ್ತದಲ್ಲಿ ಬಂಡವಾಳ ರೂ. 39303 ಕೋಟಿ ಇರುವ 5 ನೇ ಯೋಜನೆಯನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಅನುಮೋದಿಸಿದೆ

ಶ್ರೀಮಂತ ದೇಶಗಳ ನೆರವು ಅವಂಗಿ ಬೇಡ

ಮೆಕ್ಸಿಕೋ — ಏಷ್ಯಾ, ಆಫ್ರಿಕಾ ಹಾಗೂ ಲಾಟಿನ್ ಅಮೇರಿಕಾದ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಶ್ರೀಮಂತ ದೇಶಗಳ ನೆರವಿಲ್ಲದೆ ತಾವೇ ತಮ್ಮ ಆರ್ಥಿಕ ಪ್ರಾಶಸ್ತ್ಯ ಸ್ಥಾಪಿಸಲು ಈ ಸಂಬಂಧದ ಸಮ್ಮೇಳನದಲ್ಲಿ ನಿರ್ಧರಿಸಿದವು

★

ರಾಜ್ಯಪಾಲರಿಂದ ಹಿಂದಿ ಭಾಷಾಂತರ ಬಿಡುಗಡೆ

ಲಕ್ನೋ — ತಮಿಳಿನ ತಿರುಕುರಲ್, ಮರಾಠಿಯ ಶ್ರೀಲಂಮು ವಿಜಯ, ತೆಲುಗಿನ ಭಾನುಭಕ್ತ ರಾಮಾಯಣ — ಈ ಮೂರು ಗ್ರಂಥಗಳ ಹಿಂದಿ ಭಾಷಾಂತರ ಗ್ರಂಥಗಳನ್ನು ಕರ್ನಾಟಕ ರಾಜ್ಯಪಾಲರಾದ ಶ್ರೀ ಉಮಾಶಂಕರ ದೀಕ್ಷಿತರು ಬಿಡುಗಡೆ ಮಾಡಿದರು.

●

ಎರಡು ವರ್ಷಗಳಲ್ಲಿ ವಗಾವಣೆ

ಪಾಲಿಸ್ಬರಿ — ರೊಡೇಷಿಯಾ ಸರ್ಕಾರವು ಕಟ್ಟಕಡೆಗೆ ಅಲ್ಲಿಯ ಬಹುಸಂಖ್ಯಾತ ಕಪ್ಪು ಆಫ್ರಿಕನರಿಗೆ ವರ್ಗಾವಣೆ ಮಾಡುವ ಯೋಜನೆ ಜಾರಿಗೆ ತರಲು ವೇಗ ಕಾರ್ಯ ನಿರತವಾಗಲಿದೆ. ಇನ್ನು 2 ವರ್ಷಗಳೊಳಗೆ ಅಧಿಕಾರ ವರ್ಗಾವಣೆ ಮಾಡುವುದಾಗಿ ಪ್ರಧಾನಿ ಸ್ಮಿತ್ ತಿಳಿಸಿದರು.

★

ಸಂಸತ್ ತಂಡದವರ ಅಭಿಪ್ರಾಯ

ಬೆಂಗಳೂರು — ರಾಜ್ಯದ ಅನಾವೃಷ್ಟಿ ಪೀಡಿತ ಭಾಗಗಳಲ್ಲಿ ಅಭಾವ ಪರಿಸ್ಥಿತಿ ತುಂಬಾ ಆತಂಕ ಉಂಟಾಗಿದೆ ಎಂಬುದು ತೊಂದರೆಗೀಡಾಗಿರುವ ಭಾಗಗಳಲ್ಲಿ ಪ್ರವಾಸ ನಡೆಸಿದ ಸಂಸತ್ ತಂಡದ ಅಭಿಪ್ರಾಯವಾಗಿದೆ.

●

ಇಬ್ಬರ ಮೇಲೂ ಕ್ರಮಕ್ಕೆ ಸೂಚನೆ

ಬೆಂಗಳೂರು — ಸರ್ಕಾರ ಈಚೆಗೆ ಹೊರಡಿಸಿರುವ ಸುತ್ತೋಲೆಯ ಪ್ರಕಾರ ಹೇಸಿಗೆ ಹೊರುವ ಜಾಡಿಮಾಲಿಗಳು ಹಾಗೂ ಅವರಿಗೆ ಆ ಕೆಲಸ ನೇಮಿಸುವವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ಪತ್ರಿಕೆಯವರಿಗೆ ಪೌರಾಡಳಿತ ಮಂತ್ರಿಯವರಾದ ಶ್ರೀ ನಾಯ್ಡು ತಿಳಿಸಿದರು.

○

ಶೃಂಗೇರಿ — ಶ್ರೀ ಶಾರದಾ ಪೀಠದ ಆಶ್ರಯದಲ್ಲಿ ಈ ತಿಂಗಳು 23 ರಿಂದ ಬರುವ ತಿಂಗಳು 3 ರ ವರೆಗೆ ಶ್ರೀ ಶರನ್ನವರಾತ್ರಿ ನಡೆಯುವುದು.

ರಾಷ್ಟ್ರೀಯ ಸಮ್ಮೇಳನ

ಬೆಂಗಳೂರು — ಈ ವರ್ಷದ ಕಡೆಯಲ್ಲಿ ವರದಕ್ಷಿಣೆ ವಿರುದ್ಧ ರಾಷ್ಟ್ರೀಯ ಸಮ್ಮೇಳನ ಇಲ್ಲಿ ನಡೆಯಲಿದೆ. ಇದರ ನೇತೃತ್ವ ಸ್ಥಾಪಕರು ಆಂಧ್ರ ಪ್ರದೇಶ ಮಹಿಳಾ ಮತ್ತು ವಿದ್ಯಾರ್ಥಿ ಸಂಘಟನೆಗಳವರು 1 ಸಾವಿರ ಪ್ರತಿನಿಧಿಗಳು ಬರುವ ಸಂಭವ ಇದೆ.

ಕರ್ನಾಟಕ ಪಿಡಬ್ಲ್ಯೂಡಿ

ತಿದ್ದುಪಡಿ

ವಿಷಯ : ಸಂಕ್ಷಿಪ್ತ ಟೆಂಡರ್ ಪ್ರಕಟಣೆ ನಂ 15/76-77 ತಾ 13-7-1976 ಹೆಚ್ಚಿ ಡಿ ಕೋಟಿ ತಾಲ್ಲೂಕಿನ ಕಬಿನಿ ಬಲದಂಡೆ ಕಾಲುವೆಯ ನುಗ್ಗು ಹಿಕ್ಕುಲಿನ ಡ್ರಾಫ್ಟ್ ಪಕ್ಕಗಳಿಗೆ ಮತ್ತು ಅಪ್ರೋಚ್ ಮೇಲೆ ಮಣ್ಣಿನ ಏರಿಯೊಡನೆ ಕಾಂಕ್ರೀಟ್ ಪ್ಲೂಂ ಗೋಡೆಗಳನ್ನು ನಿರ್ಮಿಸುವ ವಿಚಾರದಲ್ಲಿ.

ಪಾಠಾಲಿ : 1 ಈ ಕಚೇರಿ ಪತ್ರ ನಂ ಕೆಸಿಡಿ/ಡಿಬಿ1/ಕೆಪಿಆರ್‌ಬಿಸಿ/ಟಿಎನ್‌ಡಿ/76-77 5293-304 ತಾ 15-7-1976

2 — ಡಿಟೋ — 7627-42 ತಾ 25-8-1976

15-9 1976 ರ ಬದಲು 30-9-1976 ಕ್ಕೆ ಮೇಲ್ಕಂಡ ಕೆಲಸಕ್ಕೆ ಟೆಂಡರ್‌ಗಳನ್ನು ಸ್ವೀಕರಿಸುವ ತಾರೀಖನ್ನು ಮುಂದುವರಿಸಿದೆ ಮತ್ತು 8-9-1976 ರಿಂದ 10-9-1976 ರ ವರೆಗಿನ ಒದಲು 25-9-1976 ರಿಂದ 27-9-1976 ರ ವರೆಗೆ ಟೆಂಡರ್ ಫಾರಂಗಳನ್ನು ಕೊಡಲಾಗುವುದು.

ಇತರ ಷರತ್ತುಗಳು ಬದಲಾವಣೆ ಇಲ್ಲದೆ ಹಾಗೆಯೇ ಇರುವುವು

ಸಹಿ/- ಎಕ್ಸಿಕ್ಯೂಟೀವ್ ಇಂಜಿನಿಯರ್,
ಕೆ. ಪಿ. ವಿಭಾಗ, ಮೈಸೂರು-2

ಉಸಿರುಕಟ್ಟಿ ಮರಣ

ಹಿರೋಷಿಮಾ — ಒಂದು ಮಕ್ಕಳ ಕಾಲ್ಚೆಂಡಾಟದ ಪಂಥದಲ್ಲಿ ಸಿಕ್ಕಿ ಅಗಿದ್ದ 12 ವರ್ಷದ ಮಾರ್ಸಲೋಚಿನೆ, ಆಟ ಆರಂಭದ ಶಿಳ್ಳೆ ಊದಿದಾಗ ಆಟದ ಜೊತೆಯ ಇವನ ಬಾಯಿಗೆ ಬಡಿದು ಶಿಳ್ಳೆಯು ಗಂಟಲಿಗೆ ಸಿಕ್ಕಿ ಉಸಿರುಕಟ್ಟಿ ಸತ್ತನು.

★

23 ಮಂದಿಯ ಮರಣ

ಸಾಂಟಿಯಾಗೋ — ಚಿಲಿ ಸ್ವಾತಂತ್ರ್ಯ ದಿನೋತ್ಸವ ಆಚರಿಸುತ್ತಿದ್ದ ಗುಂಪು ಮೇಲೆ 6 ಟನ್ನಿನ ಲಾರಿ ನುಗ್ಗಿ 23 ಜನ ಸತ್ತು 62 ಜನ ಗಾಯಗೊಂಡರು.

●

ಭಾರತದ ಭಾಗ ಏರಿಕೆ

ನವ ದೆಹಲಿ — ಅಂತರರಾಷ್ಟ್ರೀಯ ನಿಧಿ ಸಂಸ್ಥೆಯ ಭಾರತದ ಭಾಗ 1145 ಮಿಲಿಯದಿಂದ 2000 ಮಿಲಿಯಕ್ಕೆ ಹೆಚ್ಚಿಲಿದೆ.

○

ಮುಖ್ಯ ಮಂತ್ರಿಗಳ ಒತ್ತಾಯ

ನವ ದೆಹಲಿ — ಯೋಜನೆ ಪ್ರಾಜೆಕ್ಟ್‌ಗಳನ್ನು ಪರಿಣಾಮಕಾರಿ ಆಗಿ ಜಾರಿಗೆ ತರಲು ಕೇಂದ್ರದ ಹೆಚ್ಚು ಸಹಾಯದ ಅವಶ್ಯಕತೆ ಇದೆಯೆಂದು ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆಯಲ್ಲಿ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರು ಒತ್ತಿ ಹೇಳಿದರು.

★

ವರ್ಣರಂಜಿತ ಅಂಚೆಚೀಟಿ

ನವ ದೆಹಲಿ — ಮುಂದಿನ ತಿಂಗಳು 1 ನೇ ತಾ. ಭಾರತ ವನ್ಯ ಜೀವಿಗಳ ಕುರಿತ 4 ವರ್ಣರಂಜಿತ ಅಂಚೆಚೀಟಿಯನ್ನು ಅಂಚೆ ಮತ್ತು ತಂತಿ ಇಲಾಖೆ ಹೊರಡಿಸಲಿದೆ.

(2)

ಕೇಂದ್ರ ಸರ್ಕಾರದ ನಿಬಂಧನೆ ರಚನೆ

ನವ ದೆಹಲಿ — ಕೇಂದ್ರದಿಂದ ಹಿಂದಿ ಮಾತನಾಡುವ ರಾಜ್ಯಗಳಿಗೆ ವ್ಯವಹಾರಗಳು ಹಿಂದಿಯಲ್ಲಿ ಇರಬೇಕೆಂದು ಕೇಂದ್ರ ಸರ್ಕಾರ ನಿಬಂಧನೆಗಳನ್ನು ರಚಿಸಿದೆ.

ಈಗಾಗಲೇ ಮಾರಾಟದ ಪ್ರಾರಂಭ

ಮಾಸ್ಕೋ — ಒಲಂಪಿಕ್ ಕ್ರೀಡೆಗಳು ಇಲ್ಲಿ ನಡೆಯುವುದು ಇನ್ನೂ 4 ವರ್ಷಗಳಿದ್ದರೂ ಈಗಾಗಲೇ ಈ ಸಂಬಂಧದ ಸ್ಮರಣ ಸಂಚಿಕೆ ಮಾರಾಟ ಪ್ರಾರಂಭವಾಗಿದೆ. ಮಾಸ್ಕೋ ಸ್ಪೋರ್ಟ್ಸ್ ಹೊಂದಿರುವ ಒಲಂಪಿಕ್ ಗುರುತಿನ ಬಿಲ್ಲೆಗಳ ಕೊಳ್ಳುವಿಕೆಗೆ ಭಾರಿ ಕ್ಯೂ ಇದೆ.

★

ವರ್ಣರಂಜಿತ ದಸರಾ ಮಹೋತ್ಸವ ಉದ್ಘಾಟನೆ

ಬೆಂಗಳೂರು — ವರ್ಣರಂಜಿತ ಹತ್ತು ದಿನಗಳ ದಸರಾ ಸಮಾರಂಭವು ಅಶೋಕ ಹೊಟೇಲಿನಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್ ರವರ ಪತ್ನಿ ಶ್ರೀಮತಿ ಚಿಕ್ಕಮ್ಮಣ್ಣಿಯವರಿಂದ ಉದ್ಘಾಟಿಸಲ್ಪಟ್ಟಿತು. ಸಮಾರಂಭ ಕಾಲದಲ್ಲಿ ಜನಪದ ನೃತ್ಯ ಮತ್ತು ಭರತ ನಾಟ್ಯಗಳು ವಿವಿಧ ಕಲಾವಿದರಿಂದ ಪ್ರದರ್ಶಿಸಲ್ಪಡುವುದು ಆಕರ್ಷಣೀಯ ಬೊಂಬೆ ಪ್ರದರ್ಶನ ಏರ್ಪಾಟಾಗಿದೆ.

★

ಹೊಟೇಲಿನವರಿಗೆ ಸಹಾಯಕ

ಬೆಂಗಳೂರು — ಹೋಟಲುಗಳ ದರ್ಜೆ ವಿಂಗಡನೆ ಹೋಟಲುಗಳವರಿಗೆ ಸಹಾಯಕವಾಗಿದೆಯೇ ಹೊರತು ಬಳಕೆದಾರರಿಗಲ್ಲ ಎಂದು ವಿಧಾನ ಸಭೆ ಸದಸ್ಯ ಶ್ರೀ ಪ್ರಭಾಕರ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

★

ಅಡಳಿತ ಭಾಷೆ ವಿಚಾರ ಗೋಷ್ಠಿ

ದಕ್ಷಿಣ ರಾಜ್ಯಗಳ ಅಡಳಿತ ಭಾಷಾ ವಿಚಾರ ಗೋಷ್ಠಿ ಈ ತಿಂಗಳು 29-30 ರಂದು ಮೈಸೂರಿನ ಅಡಳಿತ ಪ್ರಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಿದೆ.

ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

ಭಾರತದಲ್ಲಿ ಗೋಪೂಜೆ

ಪೂರ್ಣ ನಿಷೇಧವಾಗಲಿ

Protect the Cow

ವುಡ್‌ಲಾಂಡ್ 24 9 76 ರಿಂದ

ಅಮೋಘ ಆರಂಭ

ರಂಗೀಲಾ ರತನ್

ಹಿಂದಿ

ಕಲರ್

ರಿಷಿಕಪೂರ್ ಪರ್ವೀನ್‌ಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೇರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ

ಕನ್ನಡ

ಪ್ರತಿ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Contribute Liberally to

the National Defence Fu

Edited Printed and Published by Dharmaprachara Anata M S. Krishna Rao (Proprietor) at the Satyavadi Press, Chamara Mysore 4